**ಸಾಕ್ಷಿಗೆ ದಿನಾಂಕ 27-04-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: 4 ನೇ ಎದುರುದಾರರ ಪರ ಶ್ರೀ ಎಂ ಎನ್ ವಕೀಲರಿಂದಃ**

1. ನಾನು ಈ ಪ್ರಕರಣದಲ್ಲಿ, 4 ನೇ ಎದುರುದಾರರನಾಗಿದ್ದು, ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನನ್ನ ಮುಖ್ಯ ವಿಚಾರಣಾ ಸಾಕ್ಷಾ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಅರ್ಜಿದಾರರ ಅರ್ಜಿಯನ್ನು ವಜಾ ಮಾಡಬೇಕೆಂದು ಪಾರ್ಥಿಸಿಕೊಳ್ಳುತ್ತೇನೆ.

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಬಿ ಎಸ್ ಎಂ ವಕೀಲರಿಂದಃ**

1. ದಿಃ30.03.2024 ರಂದು ಸಾಯಂಕಾಲ 7.30 ರ ಸಮಯದಲ್ಲಿ ಕುಣಿಗಲ್ ತುಮಕೂರು ರಸ್ತೆಯ ಮೇಲೆ ಟ್ರಾಕ್ಟರ್ ನ್ನು ನಾನೇ ಚಲಾಯಿಸುತ್ತಿದ್ದೇನು. ರಸ್ತೆಯ ಎಡಬದಿಯಲ್ಲಿ ಹೋಗುತ್ತಿದ್ದೇನು ಎಂದರೆ ಸರಿ. ಅಪಘಾತದ ಸಮಯದಲ್ಲಿ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ಇರಲಿಲ್ಲ ಎಂದರೆ ಸರಿ. ಒಂದನೇ ಎದುರುದಾರರ ವಾಹನದ ಚಾಲಕನು ನನ್ನ ಟ್ರಾಕ್ಟರ್ ನ್ನು ಹಿಂದಿಕ್ಕಲು ಹೋಗಿ ಸಾಧ್ಯವಾಗದೇ ಟ್ರಾಕ್ಟರ್ ನ ಜೊತೆ ಜೊಡಿಸಲಾಗಿದ್ದ ಟ್ರೇಲರ್ ನ ಹಿಂಬದಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ. ಈ ಅಪಘಾತದಿಂದ ಒಂದನೇ ಎದುರುದಾರರ ವಾಹನದಲ್ಲಿ ಪ್ರಯಾಣಿಸುತ್ತಿದ್ದ ರೂಪಶ್ರೀರವರಿಗೆ ತೀವ್ರವಾದ ಗಾಯಗಳು ಆಗಿದ್ದವು ಎಂದರೆ ಸರಿ. ರೂಪಶ್ರೀರವರನ್ನು ತುಮಕೂರು ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಸಾಗಿಸುವ ಮಧ್ಯದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ.

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಎಂ ಇ ಎಂ ವಕೀಲರಿಂದಃ**

1. ಪೊಲೀಸರು ನನ್ನಿಂದ ಅಪಘಾತದ ಕುರಿತು ಹೇಳಿಕೆಯನ್ನು ಪಡೆದಿರುತ್ತಾರೆ. ಸದರಿ ಹೇಳಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನಗೆ ಟ್ರಾಕ್ಟರ್ ಮತ್ತು ಟ್ರೇಲರ್ ನ್ನು ಚಾಲನೇ ಮಾಡಲು ಚಾಲನಾ ಪರವಾನಗಿ ಪತ್ರ ಇರುತ್ತದೆ. ಸದರಿ ಚಾಲನಾ

ಪರವಾನಗಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಪೊಲೀಸರ ಮುಂದೆ ನಾನು ನನ್ನ ಚಾಲನಾ ಪರವಾನಗಿ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಅಪಘಾತದ ದಿನ ಟ್ರೇಲರ್ ಖಾಲಿ ಇತ್ತು. ಪೊಲೀಸರು ನನ್ನ ವಿರುದ್ಧ ತುಮಕೂರಿನ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ವಿಚಾರಣೆಗೆ ನಾನು ಹಾಜರಾಗುತ್ತಿದ್ದೇನೆ. ಸದರಿ ಪ್ರಕರಣದ ಸಂಖ್ಯೆ ಮತ್ತು ನ್ಯಾಯಾಲಯದ ಹೆಸರು ಗೊತ್ತಿಲ್ಲ. ಆದರೆ ಸದರಿ ಪ್ರಕರಣದ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೇನು.

2. ಅಪಘಾತ ನಡೆದ ರಸ್ತೆ 16 ಅಡಿ ಅಗಲ ಇದೆ. ಸದರಿ ರಸ್ತೆಯ ಮಧ್ಯದಲ್ಲಿ ರಸ್ತೆ ವಿಭಜಕವಿಲ್ಲ. ಸದರಿ ರಸ್ತೆ ಸುಸ್ಥಿತಿಯಲ್ಲಿದೆ. ನನಗೆ ಟ್ರಾಕ್ಟರ್-ಟ್ರೇಲರ್ ನ್ನು ಚಾಲನೇ ಮಾಡಲು ಚಾಲನಾ ಪರವಾನಗಿ ಪತ್ರ ಇರದೇ ಇರುವುದರಿಂದ ನನಗೆ ಟ್ರಾಕ್ಟರ್ ಟ್ರೇಲರ್ ಚಾಲನೇ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಟ್ರಾಕ್ಟರ್ ನ್ನು ರಸ್ತೆಯಲ್ಲಿ ಅಡ್ಡ-ದಿಡ್ಡಿಯಾಗಿ ಚಾಲನೇ ಮಾಡಿಕೊಂಡು ಹೋಗುತ್ತಿದ್ದುದರಿಂದ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ಹಿಂದಿನಿಂದ ಬರುತ್ತಿದ್ದ ವಾಹನದ ಸೈರನ್ ನಿಂದ ಅಂಬ್ಯುಲೆನ್ಸ್ ಎಂದು ಗೊತ್ತಾಯಿತು ಎಂದರೆ ಸರಿ. ಅಂಬ್ಯುಲೆನ್ಸ್ ವಾಹನಕ್ಕೆ ತಕ್ಷಣಕ್ಕೆ ದಾರಿ ಬಿಟ್ಟುಕೊಡಬೇಕು ಎಂದರೆ ಸರಿ. ಸಾಮಾನ್ಯವಾಗಿ ಅಂಬ್ಯುಲೆನ್ಸ್ ರವರು ಸೈರನ್ ಮಾಡುವ ಸಂದರ್ಭದಲ್ಲಿ ವೇಗವಾಗಿ ಹೋಗುತ್ತಿರುತ್ತಾರೆ ಎಂದರೆ ಸರಿ.

3. ಅಪಘಾತದ ಸಮಯದಲ್ಲಿ ನನ್ನ ಟ್ರಾಕ್ಟರ್-ಟ್ರೇಲರ್ ಗೆ ವಿಮೆ ಇರುವುದಿಲ್ಲ ಎಂದರೆ ಸರಿ. ವಿಮೆ ಇಲ್ಲದ ವಾಹನಗಳನ್ನು ಚಾಲನೇ ಮಾಡುವುದು ಅಪರಾಧ ಎಂದು ನನಗೆ ತಿಳಿದಿತ್ತು ಎಂದರೆ ಸರಿ. ನನ್ನ ಟ್ರಾಕ್ಟರ್-ಟ್ರೇಲರ್ ನ ಹಿಂದೆ ಅಂಬ್ಯುಲೆನ್ಸ್ ಬರುತ್ತಿರುವುದು ನನಗೆ ತಿಳಿದಿದ್ದರೂ ಸಹ ಅದರಿ ಅಂಬ್ಯುಲೆನ್ಸ್ ಗೆ ದಾರಿ ನೀಡದೇ ರಸ್ತೆ ಮಧ್ಯದಲ್ಲಿ ಅಡ್ಡಾ ದಿಡ್ಡಿಯಾಗಿ ನನ್ನ ಟ್ರಾಕ್ಟರ್-ಟ್ರೇಲರ್ ನ್ನು ಚಾಲನೇ ಮಾಡಿಕೊಂಡು ಹೋಗುತ್ತಿದ್ದುದರಿಂದ ಈ ಅಪಘಾತ ನನ್ನ ತಪ್ಪಿನಿಂದ ಉಂಟಾಗಿದೆ ಎಂದರೆ ಸರಿಯಲ್ಲ. ಅಪಘಾತದ ದಿನ ಟ್ರಾಕ್ಟರ್ ನ ಇಂಜಿನ್ ನಲ್ಲಿ ಮುರುಳಿ ಎನ್ನುವವರು ನನ್ನ ಜೊತೆಗೆ

ಇದ್ದರು. ಅಪಘಾತದಿಂದ ನನಗೂ ಮತ್ತು ಮುರುಳಿಗೂ ಯಾವುದೇ ಗಾಯಗಳು ಉಂಟಾಗಿರುವುದಿಲ್ಲ. ಅಪಘಾತದಿಂದ ನನ್ನ ಟ್ರೇಲರ್ ನ ಹಿಂಬದಿಯ ಡೋರ್ ಗೆ ಸ್ವಲ್ಪ ಜಖಂ ಉಂಟಾಗಿತ್ತು.

4. ಅಂಬ್ಯುಲೆನ್ಸ್ ನಲ್ಲಿದ್ದ ಇಬ್ಬರಿಗೆ ಗಾಯಗಳು ಉಂಟಾಗಿದ್ದವು. ಸದರಿ ಗಾಯಾಳುಗಳನ್ನು ನಾನು ಮತ್ತು ಮುರುಳಿ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದೇವು. ಸದರಿ ಆಸ್ಪತ್ರೆಯಲ್ಲಿ ವೈದ್ಯರು ಗಾಯಗಳ ಹಿನ್ನೆಲೆಯನ್ನು ಕೇಳಿರುವುದಿಲ್ಲ. ಪೊಲೀಸರು ನನ್ನ ಟ್ರಾಕ್ಟರ್-ಟ್ರೇಲರ್ ಗೆ ವಿಮೆ ಇಲ್ಲದ ಕಾರಣ ನನ್ನ ವಿರುದ್ಧ ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಪೊಲೀಸರು ಅಪಘಾತವು ನನ್ನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಉಂಟಾಗಿದೆ ಎಂದು ದೋಷಾರೋಪಣಾಪಟ್ಟಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನ್ನ ನಿರ್ಲಕ್ಷ್ಯತನದಿಂದ ಅಪಘಾತವಾಗಿದ್ದರೂ ಸಹ ನಾನು ಪೊಲೀಸರೊಂದಿಗೆ ಶಾಮೀಲಾಗಿ ಒಂದನೇ ಎದುರುದಾರರ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ದೋಷಾರೋಪಣಾಪಟ್ಟಿ ಸಲ್ಲಿಸುವಂತೆ ಪ್ರೇರೆಪಿಸಿರುತ್ತೇನೆ ಎಂದರೆ ಸರಿಯಲ್ಲ. ಒಂದನೇ ಎದುರುದಾರರ ವಾಹನದ ದಾಖಲೆಗಳು ಸರಿಯಾಗಿವೆ ಎಂದು ಪೊಲೀಸ್ ಠಾಣೆಯಲ್ಲಿ ಗೊತ್ತಾಗಿರುತ್ತದೆ. ಆದ್ದರಿಂದ ಒಂದನೇ ಎದುರುದಾರರ ವಾಹನದ ಚಾಲಕನ ವಿರುದ್ಧ ದೋಷಾರೋಪಣಪಟ್ಟಿ ಸಲ್ಲಿಸಿಲಾಗಿದೆ ಎಂದರೆ ಸರಿ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಕು.ಅರ್ಪಿತಾ ವಕೀಲರು ಶ್ರೀ ಆರ್ ವಿ ಕೆ ವಕೀಲರ ಪರವಾಗಿಃ**

**ಮೂರನೇ ಎದುರುದಾರರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

**ಪಾಟೀ ಸವಾಲುಃ ಒಂದನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು-ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**